ಅಸಲು ದಾವಾ ಸಂಖ್ಯೆ- 133/2017
ಡಿಡಬ್ಲ್ಯೂ- 01
ದಿನಾಂಕಃ 23.02.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ. ಎನ್ ಎಸ್ ಪಿ ವಕೀಲರಿಂದ</u>

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ . ದಾವಾ ಆಸ್ತಿಯನ್ನು ನೋಡಿದ್ದೇನೆ. ಅದು ನಮ್ಮ ಮನೆ ಎದುರಿಗೆ ಇದೆ. ದಾವಾ ಆಸ್ತಿ ಮೂಲತಃ ಮಹಾಂತಸ್ವಾಮಿ ಸಂಕಿನಮಠ ಇವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ದಿನಾಂಕ 27.10.1992 ರಂದು ವಾದಿ ದಾವಾ ಆಸ್ತಿಯನ್ನು ಮಹಾಂತಸ್ವಾಮಿ ಇವರಿಂದ ನೊಂದಾಯಿತ ಖರೀದಿ ಪತ್ರದ ಮುಖಾಂತರ ಖರೀದಿಸಿದ್ದಾರೆ ಎಂದರೆ ಸರಿ . ಖರೀದಿ ಪತ್ರದ ಆಧಾರದ ಮೇಲೆ ವಾದಿಯ ಹೆಸರು ಪುರಸಭೆ ದಾಖಲೆಗಳಲ್ಲಿ ದಾಖಲಾಗಿದೆ ಎಂದರೆ ಸರಿ. ವಾದಿ ಖರೀದಿ ಹಿಡಿದ ಖರೀದಿ ಪತ್ರವನ್ನು 1992 ರಲ್ಲೆ ನೋಡಿದ್ದೇನೆ. ವಾದಿ ಒಟ್ಟು 4 ಟಾಕಿನ ಆಸ್ತಿಯನ್ನು ಖರೀದಿಸಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಪುರಸಭೆ ನಂ.87 ಎಂದರೆ ಸರಿ. ದಾವಾ ಆಸ್ತಿ ಖರೀದಿ ಹಿಡಿದಾಗಿನಿಂದ ವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ.

ವಾದಿಯ ಹಳೆ ಮನೆ ಮೊದಲಿಗೆ ದಕ್ಷಿಣಕ್ಕೆ ಮುಖವಾಗಿತ್ತು ಎಂದರೆ ಸರಿ. ವಾದಿ ಹಳೆ ಮನೆಯನ್ನು ಕೆಡವಿ 8 ವರ್ಷಗಳ ಹಿಂದೆ ಒಂದು ಹೊಸ ಮನೆ ಕಟ್ಟಿಸಿದ್ದಾರೆ ಎಂದರೆ ಸರಿ. ಹೊಸ ಮನೆ ಪೂರ್ವಕ್ಕೆ ಮುಖವಾಗಿದೆ ಎಂದರೆ ಸರಿ. ವಾದಿಯ ಆಸ್ತಿಯ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ. ವಾದಿಯ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅನುಭೋಗದ ಹಕ್ಕು ಇದೆ ಎಂದು ನುಡಿಯುತ್ತಾರೆ. ಅನುಭೋಗದ ಹಕ್ಕನ್ನು ಕೋರಿ ವಾದಿಯ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿಲ್ಲ ಎಂದರೆ ಸರಿ. ಅನುಭೋಗದ ಹಕ್ಕನ್ನು ಕೋರಿ ದಾವೆಯನ್ನು ದಾಖಲಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಆಧರಿಸುವಂತೆ ವಾದಿಯ ಆಸ್ತಿಯ ಸರಕಾರಿ ಆಸ್ತಿ ನಂ.175 ಇರುತ್ತದೆ. ಸಾಕ್ಷಿ ಪುನಃ 178 ಇರುತ್ತದೆ ಎಂದು ನುಡಿಯುತ್ತಾರೆ. ಸರಕಾರಿ ಜಾಗೆ ಇರುವ ಕುರಿತು ತೋರಿಸಲು ನ್ಯಾಯಾಲಯದಲ್ಲಿ ಉತಾರೆಯನ್ನು ಹಾಜರುಪಡಿಸಿದ್ದೇನೆ. ಸದರಿ ಉತಾರೆಯನ್ನು ನೋಡಿದ್ದೇನೆ. ಅದು ಈ ಹಿಂದೆ ಪೀರಮ್ಮ ಹುಸೇನಸಾಬ ಬರದೂರ ಇವರ ಹೆಸರಿನಲ್ಲಿ ಇತ್ತು. ನಿಡಿ-3 ರಲ್ಲಿ ಆಸ್ತಿ ನಂ.74 ನ್ನು ಮಹಾಂತಸ್ವಾಮಿ ಸಂಕಿನಮಠ ಎನ್ನುವವರು

ಪೀರಮ್ಮ ಬರದೂರು ಇವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ನಾನು ಆಧರಿಸಿರುವ ಸರಕಾರಿ ಆಸ್ತಿ ನಂ.178 ಮತ್ತು ಆಸ್ತಿ ನಂ.74 ಬೇರೆ ಬೇರೆ ಇವೆ ಎಂದರೆ ಸರಿಯಲ್ಲ. ಎರಡೂ ಆಸ್ತಿಗಳು ಒಂದೇ ಎಂದು ತೋರಿಸಲು ಉತಾರೆಯನ್ನು ಹಾಜರುಪಡಿಸಿದ್ದೇನೆ. ಪುರಸಭೆ ಆಸ್ತಿ ನಂ.74 ರ ಉತಾರೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಪುರಸಭೆಯಲ್ಲಿ ಸದರಿ ಆಸ್ತಿಯ ಉತಾರೆಯನ್ನು ತೆಗೆಸಿ ನೋಡಿಲ್ಲ. ನಿಡಿ-1 ಕ್ಕೂ ಮತ್ತು ಪುರಸಭೆ ಆಸ್ತಿ ನಂ.74 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ-1 ನ್ನು 1992 ರಲ್ಲಿ ಪಡೆದುಕೊಂಡಿದ್ದೇನೆ. ನಿಡಿ-1 ನ್ನು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಸೃಷ್ಟಿಸಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ಆಸ್ತಿ ನಂಬರನ್ನು 85 ಎಂದು ತೋರಿಸಲಾಗಿದೆ ಎಂದರೆ ಸರಿ. ನಿಡಿ-2 ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ಪುರಸಭೆ ಅಧಿಕಾರಿಗಳು ವಾದಿಯ ಹೆಸರನ್ನು ದಾಖಲಿಸಲು ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿರುವ ಖರೀದಿಪತ್ರ ಹಾಗೂ ವಾದಿ ಖರೀದಿ ಹಿಡಿದ ಖರೀದಿಪತ್ರವನ್ನು ಯಾವುದೇ ನ್ಯಾಯಾಲಯದಲ್ಲಿ ಇದುವರೆಗೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ವಾದಿಯ ಹೆಸರು ದಾವಾ ಆಸ್ತಿಯ ಉತಾರೆಯಲ್ಲಿ ದಾಖಲಾಗಿದೆ ಇಲ್ಲವೋ ನಾನು ನೋಡಿಲ್ಲ. ಕಂದಾಯ ಇಲಾಖೆಯಲ್ಲಿ ವಾದಿಯ ಹೆಸರನ್ನು ಕಡಿಮೆ ಮಾಡುವಂತೆ ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.

Case called out, Plaintiff No.1 and counsel present. MSM files memo with 1 document. Plaintiff No.1 filed affidavit on oath she is examined as PW-1 exp-1 to 4 marked. Fully cross examined. MSM submits no further evidence. Hence side of plaintiff is closed. CSM submits no oral evidence of defendants. Hence side of defendants is closed. For plaintiff arguments on merits . Call on 16-10-2020

CJ and JMFC. Savanur

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು  ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.